

# ನೀರ ಹನಿಯಲ್ಲಿ ಬಣ್ಣದ ಓಕುಳಿ!

ಚಿತ್ರ ಲೇಖನ: ಕೇಶವ ಕುಡ್ಲ

ಛಾಯಾಗ್ರಾಹಕರನ್ನು ಇನ್ನಿಲ್ಲದಂತೆ ಸದಾ ಅಕರ್ಷಿಸುವ ವಸ್ತುಗಳಲ್ಲಿ ನೀರಿನ ಹನಿಗಳು ಸದಾ ಮುಂದೆ! ಹವ್ಯಾಸಿಯೇ ಇರಲಿ ಅಥವಾ ವೃತ್ತಿಪರರೇ ಇರಲಿ, ಯಾವುದೇ ಛಾಯಾಗ್ರಾಹಕರಿಗೂ ಹಿಮದ ಬಿಂದುಗಳೆಂದರೆ ತೀರದ ಮೋಹ. ಈಗೇನೋ ಆಧುನಿಕ ತಂತ್ರಜ್ಞಾನದಿಂದಾಗಿ ಬೇಕಾದಲ್ಲೆಲ್ಲಾ ಕಂಪ್ಯೂಟರಿನಲ್ಲಿ ಕೃತಕವಾಗಿ ನೀರಹನಿಗಳ  ಎಫೆಕ್ಟ್  ಸೃಷ್ಟಿಸಲು ಸಾಧ್ಯವಿದೆಯಾದರೂ ಆ 'ಕೃತ್ರಿಮ ಆಟ'ದಲ್ಲಿ ನೈಜ ಹನಿಗಳ ಜೀವಂತಿಕೆ ಇರಲು ಸಾಧ್ಯವೇ ಇಲ್ಲ. ಹಾಗಾಗಿ ಮುತ್ತಿನಂತೆ ಹೊಳೆವ ಹನಿಗಳು ಎಲ್ಲೇ ಕಾಣಿಸಿಕೊಂಡರೂ ಕ್ಯಾಮೆರಾದ ಲೆನ್ಸ್ ಅದರತ್ತ ತಿರುಗಿಯೇ ಬಿಡುತ್ತದೆ.

ಹೀಗೇ ಕಳೆದ ಮಾಗಿಯ ಚಳಿಯ ದಿನಗಳಲ್ಲಿ ಒಂದು ದಿನ ನಾನೂ ಸಹಾ ಸೂರ್ಯೋದಯದ ಸುಪ್ರಭಾತದ ಕ್ಷಣಗಳಲ್ಲಿ ಕೈತೋಟದ ಗಿಡಗಳ ಮೇಲಿದ್ದ ನೀರ ಹನಿಗಳನ್ನು ಕ್ಯಾಮೆರಾದ ಮ್ಯಾಕ್ರೋ ಕಣ್ಣಿನಿಂದ ಗಮನಿಸುತ್ತಿದ್ದಾಗ ಅವುಗಳಲ್ಲಿ ಪ್ರತಿಫಲಿಸಿದ ಸೂರ್ಯನ ಎಳೆಯ ಕಿರಣಗಳನ್ನು ಕಂಡು ವಿಸ್ಮಿತನಾದೆ! ಅದರ ಬಗ್ಗೆ ಒಂದು ಸ್ಪಷ್ಟ ಕಲ್ಪನೆ ಮಾಡಿಕೊಳ್ಳುವಷ್ಟರಲ್ಲಿ ಸೂರ್ಯನ ಬಿಸಿಗೂ, ಬೀಸಿ ಬಂದ ಗಾಳಿಗೂ ಬೆದರಿದ ನಾಜೂಕಾದ ಹನಿಗಳು ಶೂನ್ಯದಲ್ಲಿ ಕಣ್ಮರೆಯಾಗಿ ಬಿಟ್ಟವು.

ಆ ಕ್ಷಣದಲ್ಲಿ ಹೊಳೆದ ಅಮೂರ್ತವಾದೊಂದು ಕಲ್ಪನೆಯ ಬಗೆಗೇ ಯೋಚಿಸುತ್ತಾ ಮರುದಿನ ಬೆಳಗ್ಗೆ ಸೂರ್ಯನ ಸವಾರಿ ಚಿತ್ತೈಸುವ ಮೊದಲೇ ಕಿರಣಗಳು ನೇರವಾಗಿ ಬೀಳಬಲ್ಲಂತಹ ಜಾಗವೊಂದನ್ನು ಆರಿಸಿ ಕುಳಿತೆ. ರಾತ್ರಿ ಬಿದ್ದಿದ್ದ ದಟ್ಟವಾದ ಹಿಮದ ಪದರ ಸಾಂದ್ರವಾಗುತ್ತಾ ಹನಿಗಳ ಆಕಾರಕ್ಕೆ ಬರುವ ವೇಳೆಗೆ ಸೂರ್ಯನ ಕಿರಣಗಳೂ ತೂರಿಬಂದವು.

ಸೂರ್ಯಕಿರಣಗಳು ಬೀಳುತ್ತಿದ್ದ ಕೋನದಲ್ಲೇ ಇದ್ದ ಹಿಮಮಣಿಗಳನ್ನು ತೀರಾ ಹತ್ತಿರದಿಂದ ವೀಕ್ಷಿಸಿದಾಗ ಅಲ್ಲಿ ಗೋಚರಿಸಿದ ನಿಸರ್ಗದ ಕೌಶಲ್ಯವನ್ನು, ಸೌಂದರ್ಯದ ಸಂಯೋಜನೆಯನ್ನೂ ಕಂಡು ಬೆರಗಾದೆ. ಆ ಹನಿಗಳೆಲ್ಲಾ ಎಲ್ಲೆಲ್ಲೋ ಇದ್ದುದರಿಂದ ಕ್ಯಾಮೆರಾದ ಟ್ರೈಪಾಡನ್ನು ಉಪಯೋಗಿಸಲೂ ಸಾಧ್ಯವಾಗದೆ ಬಗ್ಗಿ,





ಎದ್ದು, ಕುಳಿತು, ನಿಂತು ವಿವಿಧ ಭಂಗಿಗಳಲ್ಲಿ ಸರ್ಕಸ್ ಮಾಡುತ್ತಾ ಫೋಟೋ ಕ್ಲಿಕ್ಕಿಸುತ್ತಿರುವಾಗಲೇ ಗಾಳಿ ಬೀಸಿ ಹನಿಗಳೆಲ್ಲಾ ಮಾಯವಾಗಿ ಬಿಡಬೇಕೆ? ಮರುದಿನ, ಅದರ ಮರುದಿನ, ಮತ್ತೂ ಒಂದು ದಿನ ನನಗೆ ಬೇಕಾದ ಜಾಗದಲ್ಲಿ ಬಟ್ಟೆಗಳ ತೆರೆ ಕಟ್ಟಿ ಗಾಳಿ ಬೀಸದಂತೆ ರಕ್ಷಣೆ ಮಾಡಿಕೊಂಡು ಸೂರ್ಯನ

(8ನೇ ಪುಟ ನೋಡಿ)